SERVICE ABOVE SELF



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

Rtn. CA Dev Anand
District Governor 2024-25

Rtn. K. Sooryanarayana Udpa
President, Mob: 99009 66114

Rtn. N.G. Usha
Secretary, Mob : 81975 92278

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –39 ದಿನಾಂಕ : 26–03–2025

**ದಿನಾಂಕ: 26.03.2025 ರ ಕ್ಲಬ್ ಅಫೇರ್ಸ್ ಸಭೆ. ಅಧ್ಯಕ್ಷರಾದ ರೊ.ಕೆ.ಸೂರ್ಯ ನಾರಾಯಣ ಉಡುಪರು, ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಸಭೆಯನ್ನು ವೇದಿಕೆಯಲ್ಲಿದ್ದು ನಡೆಸಿಕೊಟ್ಟರು.**


ರೊ. ಕಿಶೋರ್ ಶೀರನಾಳಿಯವರು "ಶ್ರೀಮನ್ನಾರಾಯಣ ಶರಣು" ಎಂಬ ಗೀತೆಯನ್ನು ಸುಶ್ರಾವ್ಯವಾಗಿ ಹಾಡುವುದರ ಮುಖಾಂತರ ಪ್ರಾರ್ಥನೆ ಮಾಡಿದರು. ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಸರ್ವರನ್ನು ಸ್ವಾಗತಿಸಿದರು. ಒಟ್ಟಾರೆ ವರದಿಯನ್ನು ಕಾರ್ಯದರ್ಶಿ ರೊ.ಎನ್. ಜಿ ಉಷಾರವರು ಓದಿದರು.

ಮುಂದಿನ ವಾರ ಹೌಸಿ ಗೇಮ್ ಆಡಿಸಬಹುದು ಎಂಬ ಸಲಹೆಗೆ ಉತ್ತರವಾಗಿ ರೊ. ಕಿಶೋರ್ ಶೀರನಾಳಿಯವರು ಸಂಪನ್ಮೂಲ ವ್ಯಕ್ತಿಗಳ ಭಾಷಣದ ನಂತರ ಗೇಮ್ ಆಡಿಸಬಹುದು ಎಂದರು. ರೊ.ಟಿ.ಕೆ.ಎಂ. ಭಟ್‌ರವರು ಮಾತನಾಡಿ, ಸದಸ್ಯರಿಂದ ಕ್ಲಾಸಿಫಿಕೇಶನ್ ಟಾಕ್ ಮಾಡಿಸಬಹುದು ಎಂದರು. ನಮ್ಮ ಕ್ಲಾಸಿಫಿಕೇಶನ್ ಬಗ್ಗೆ ಯಾವುದೇ ತಯಾರಿ ಇಲ್ಲದೇ ಮಾತನಾಡಲಾಗದು. ಅಲ್ಲದೇ ನಾವು ಸಮಯಕ್ಕೆ ಬೆಲೆ ಕೊಡಬೇಕು. 20 ನಿಮಿಷ ಫೆಲೋಶಿಪ್, 20 ನಿಮಿಷ ಕ್ಲಬ್ ಅಫೇರ್ಸ್ 20 ನಿಮಿಷ ಕ್ಲಬ್‌ನ ಸದಸ್ಯರ ಅನುಭವಗಳ ಬಗ್ಗೆ ಹಂಚಿಕೊಳ್ಳಬಹುದು ಎಂದರು, ಎಲ್ಲರೂ ಬ್ಯುಸಿಯಿರುವುದರಿಂದ ಸಮಯಕ್ಕೆ ಸರಿಯಾಗಿ ಪ್ರಾರಂಭವಾಗಿ ಮುಕ್ತಾಯವಾಗಲಿ ಎಂದರು. ಅಲ್ಲದೇ ಸದಸ್ಯರ ಮೇಲು ಗುರುತರವಾದ ಜವಾಬ್ದಾರಿ ಇದೆ. ನಾವುಗಳು ಕೂಡ ಸಮಯಕ್ಕೆ ಸರಿಯಾಗಿ ಬರಬೇಕು ಎಂದರು.

ರೊ. ಡಿ.ಎಸ್.ನಟರಾಜರವರು ಮಾತನಾಡಿ, ರೋಟರಿ ಸದಸ್ಯರುಗಳಿಗೆ ಪ್ಲಾಟ್‌ಫಾರಂ ಬೇಕಾಗುತ್ತದೆ. ಎಲ್ಲ ಸದಸ್ಯರ ಜೊತೆ ಮುಖ್ಯವಾಗಿ ಹಿರಿಯರ ಮಾರ್ಗದರ್ಶನದೊಂದಿಗೆ ನಾವು ಕೆಲಸ ಮಾಡುತ್ತಿದ್ದೆವು. ಮುಖ್ಯವಾಗಿ ಹೊಸಬರ ಪರಿಚಯವಿರುತ್ತಿರಲಿಲ್ಲ. ಅವರುಗಳನ್ನೆಲ್ಲಾ ವೇದಿಕೆಗೆ ಆಹ್ವಾನಿಸಿ ಪರಿಚಯವನ್ನು ಹಿಂದೆ ಮಾಡಿಸುತ್ತಿದ್ದರು. ಬೇರೆಯು ಸದಸ್ಯರು ಪಕ್ಕದಲ್ಲಿದ್ದರೂ ಪರಿಚಯವಿರುತ್ತಿರಲಿಲ್ಲ. ಪರಿಚಯ ಮಾಡಿಸಬೇಕು. ಈ ತರಹೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಿರಿ ಎಂದರು.

ರೊ. ಕಿಶೋರ್ ಶೀರನಾಳಿಯವರು ಇತ್ತೀಚೆಗೆ ನಡೆದ ರೋಟರಿ ಜಿಲ್ಲೆ 3182 ಜಿಲ್ಲಾ ಗವರ್ನರ್ ರೊ.ದೇವ್ ಆನಂದರವರು ನಮ್ಮ ಕ್ಲಬ್‌ಗೆ ಭೇಟಿ ನೀಡಿದಾಗ ಹಮ್ಮಿಕೊಂಡ ಕಾರ್ಯಕ್ರಮಗಳು ಅತ್ಯಂತ ಯಶಸ್ವಿ ಪೂರ್ಣವಾಗಿರುವುದರ ಬಗ್ಗೆ ಎಳೆ ಎಳೆಯಾಗಿ ಕಾರ್ಯಕ್ರಮಗಳನ್ನು ವಿವರಿಸಿದರು.






ಕೊನೆಯಲ್ಲಿ ರೊ.ಎನ್.ಜಿ. ಉಷಾರವರು ಸರ್ವರನ್ನು ವಂದಿಸಿದರು. ರಾಷ್ಟ್ರಗೀತೆಯ ನಂತರ ಸಭೆ ಮುಕ್ತಾಯವಾಯಿತು. ಆನಂತರ ಚಾರ್ಟರ್ ಡೇ ಪ್ರಯುಕ್ತ ಸದಸ್ಯರುಗಳಿಗೆ ಕೆಲವೊಂದು ಆಟಗಳನ್ನು ಆಡಿಸಲಾಯಿತು.

## ಈ ವಾರ

**ದಿನಾಂಕ: 02–04–2025, ಬುಧವಾರ ಸಂಜೆ 6:45 ರಿಂದ**

ಮುಖ್ಯ ಅತಿಥಿ: **ಶ್ರೀ ಗೋಪಾಲ್ ಯಡಗೆರೆ**

ವಿಶೇಷ ವರದಿಗಾರರು– ಕನ್ನಡ ಪ್ರಭ ಪತ್ರಿಕೆ

ವಿಷಯ: **ಸೋಲನ್ನು ಸೋಲಿಸಿ**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ

# ರೋಟರಿ ಕ್ಲಬ್ ಶಿವಮೊಗ್ಗದ ವತಿಯಿಂದ ಮಹಿಳಾ ನಾಟಕೋತ್ಸವ – ಕಲಾಸಿಂಚನ ನಾಟಕ ಸ್ಪರ್ಧೆ ಹಾಗೂ ಹಾಸ್ಯ ಸ್ವಾರಸ್ಯ ನಗೆಹಬ್ಬ ಕಾರ್ಯಕ್ರಮ


**ದಿನಾಂಕ: 28–03–2025ರಂದು ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ನಾಟಕ ಸ್ಪರ್ಧೆಯ ಪ್ರಾರಂಭಕ್ಕೆ ಮುಂಚೆ ನಮ್ಮ ಕ್ಲಬ್ ಮಾಜಿ ಸಹಾಯಕ ಗವರ್ನರ್ ರೊ. ಸುನೀತಾ ಶ್ರೀಧರ್‌ರವರು ಸ್ವಾಗತ ಹಾಗೂ ತೀರ್ಪುಗಾರರ ಪರಿಚಯವನ್ನು ಮಾಡಿಕೊಟ್ಟರು. ಉತ್ತಮ ಜೀವನ ಸಂದೇಶದೊಂದಿಗೆ ಒಂಬತ್ತು ಮಹಿಳಾ ತಂಡಗಳು ನಾಟಕವನ್ನು ಪ್ರದರ್ಶಿಸಿದವು. ತೀರ್ಪುಗಾರರಾಗಿ ರಂಗಭೂಮಿ ಕಲಾವಿದರು ಹಾಗೂ ನಿವೃತ್ತ ಪ್ರಿನ್ಸಿಪಾಲ್ ಡಾ. ಹೆಚ್. ಎಸ್. ನಾಗಭೂಷಣ್, ಬಿ.ಡ್. ಕಾಲೇಜ್ ಪ್ರಿನ್ಸಿಪಾಲ್ ಹಾಗೂ ರಂಗೂಮಿ ಕಲಾವಿದರಾದ ಡಾ. ಚಿದಾನಂದ್ ಎನ್.ಕೆ. ಮತ್ತು ರಂಗ ಕಲಾವಿದೆ ಹಾಗೂ ನಿರ್ದೇಶಕರಾದ ಉಷಾ ನಟೇಶ್‌ರವರು ಆಗಮಿಸಿದ್ದರು.**






ಪ್ರಾರ್ಥನೆ


ಸ್ವಾಗತ


ನಿರೂಪಣೆ




Salute the Silent Workers





ಸಂಜೆ 6.30 ಕ್ಕೆ ಬಹುಮಾನ ವಿತರಣೆ ಮತ್ತು ವೇದಿಕೆ ಕಾರ್ಯಕ್ರಮ ನಡೆಯಿತು. ಅಲ್ಲದೇ ಹಾಸ್ಯಚಟಾಕಿ ಕಾರ್ಯಕ್ರಮವೂ ಸಹ ನಡೆಯಿತು. ಅಂದು ವೇದಿಕೆಯ ಮೇಲೆ ಉದ್ಘಾಟಕರಾಗಿ ಆಗಮಿಸಿದ್ದ ವಲಯ 10 ರ ಸಹಾಯಕ ಗವರ್ನರ್ ರೊ.ಎಸ್.ಆರ್. ನಾಗರಾಜ್, ಜೀ ಟಿ.ವಿ. ಖ್ಯಾತಿಯ ಹಾಸ್ಯಕಲಾವಿದರಾದ ಶ್ರೀಮತಿ ಕವಿತಾ ಸುಧೀಂದ್ರ, ರೊ.ಕೆ.ಸೂರ್ಯನಾರಾಯಣ ಉಡುಪರು, ರೊ.ಚಿದಾನಂದ, ರೊ. ಉಷಾ ನಟೇಶ್, ರೊ.ಕಿಶೋರ್ ಶೀರನಾಳಿ, ನಿರ್ದೇಶಕರು, ರೊ.ಎನ್.ವಿ.ಭಟ್, ಕಾರ್ಯಕ್ರಮ ಸಮಿತಿ ಚೇರ್ಮನ್, ರೊ. ವೀರಣ್ಣ ಎ. ಹುಗ್ಗಿಯವರು, ರೊ.ಎನ್.ಜಿ. ಉಷಾ, ಕಾರ್ಯದರ್ಶಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅಂದಿನ ಸಮಾರಂಭವು ರೊ. ಸುಮಲತಾ ಭೂಪಾಳಂರವರಿಂದ – ಭಾವದಲೆಯಲಿ ಶಾರದೆಗಾನ ಎಂಬ ಗೀತೆಯು ಸುಶ್ರಾವ್ಯಗಾಯನದೊಂದಿಗೆ ಪ್ರಾರ್ಥನೆಯಾಯಿತು. ರೊ.ಭಾರ್ಗವಿ ಭಟ್‌ರವರಿಂದ ಸ್ವಾಗತವಾಯಿತು. ರೊ. ಗಾಯತ್ರಿ ಸುಮತೀಂದ್ರರವರಿಂದ ಉದ್ಘಾಟಕರಾದ ವಲಯ 10 ರ ಸಹಾಯಕ ಗವರ್ನರ್ ರೊ.ಎಸ್. ಆರ್.ನಾಗರಾಜರ ಪರಿಚಯವನ್ನು ಮಾಡಿದರು. ರೊ. ಎನ್.ವಿ. ಭಟ್‌ರವರು ಕವಿತಾ ಸುಧೀಂದ್ರರವರ ಪರಿಚಯ ಮಾಡಿದರು. ನಂತರ ವೇದಿಕೆಯಲ್ಲಿದ್ದ ಸರ್ವರೊಂದಿಗೆ ರೊ.ಎಸ್. ಆರ್.ನಾಗರಾಜ್‌ರವರು ದೀಪ ಬೆಳಗುವುದರ ಮೂಲಕ ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿದರು.

ಮುಖ್ಯ ಅತಿಥಿಗಳಾದ ಜೀ ಟಿ.ವಿ. ಖ್ಯಾತ ಹಾಸ್ಯಕಲಾವಿದರಾದ ಶ್ರೀಮತಿ ಕವಿತಾ ಸುಧೀಂದ್ರರವರು ತಮ್ಮ ಹಾಸ್ಯಭರಿತ ಮಾತುಗಳಿಂದ ಆಗಮಿಸಿದ್ದ ಸರ್ವರ ಮನಸೂರೆಗೊಂಡರು. ಭಾರತ ಮಾತಾಕಿ ಜೈ ಎನ್ನುತ್ತಾ, ಚಪ್ಪಾಳೆಯನ್ನು ಗಿಟ್ಟಿಸಿಕೊಳ್ಳುತ್ತಾ ತಮ್ಮ ಮಾತನ್ನು ಪ್ರಾರಂಭಿಸಿದ ಶ್ರೀಮತಿ ಕವಿತಾರವರು, ಹೆಣಕ್ಕಳೇ ಸ್ಟ್ರಾಂಗು ಗುರು ಎನ್ನುತ್ತಾ ನಾವು ಮನಸುಗಳನ್ನು ಒಂದು ಮಾಡುವುದಕ್ಕೆ ಸ್ಟ್ರಾಂಗ್‌ಆಗೋಣ. ಭಾರತದಲ್ಲಿ ಮಹಿಳೆಯರಿಗೆ ಗೌರವವಿದೆ. ಸಹನೆ ಇದೆ. ಈಗಿನ ಮಕ್ಕಳಿಗೆ ನಮ್ಮ ಭಾಂಧವ್ಯ ಪ್ರೀತಿಯನ್ನು ಹೇಳಿ ಕೊಡೋಣ. ನಾವು ಸಾಧ್ಯವಾದಷ್ಟು ಒಳ್ಳೆಯದನ್ನು ಮಾಡಬೇಕು. ಈಗಿನ ಹೆಣ್ಣು ಮಕ್ಕಳಿಗೆ ಖುಷಿ ಎಂಬುದೇ ಇಲ್ಲ. ಹಿಂದಿನ ದಿನಗಳ ಸಂಸ್ಕಾರ ಇಲ್ಲ. ಈ ಹಿಂದೆ ತಾಯಂದಿರು ಗೌರವ ಕೊಡುವಂತೆ ವರ್ತಿಸುತ್ತಿದ್ದರು. ಈಗ ಮಕ್ಕಳಿಗೆ ಮೊಬೈಲ್ ಆಸ್ತಿಯಾಗಿದೆ ಎಂದರು.

ಈಗ ಚಿಂತನೆಯೇ ಬೇರೆ ತರಹ ಇದೆ. ಆತಂಕ ಬಿಟ್ಟು ಬದುಕಬೇಕಾಗಿದೆ. ಬುದ್ಧ ವಿವೇಕಾನಂದರ ಚಿಂತನೆ ಅಗತ್ಯವಾಗಿದೆ. ಆತಂಕ ರಹಿತ ಜೀವನ ಬೇಕಾಗಿದೆ ಎಂದು ತಮ್ಮ ಹಾಸ್ಯ ಮಿಶ್ರಿತ ಪ್ರಸಂಗಗಳನ್ನು ಹೇಳುತ್ತಾ, ಪ್ರೊ.ಕೃಷ್ಣೇಗೌಡರ ಸುಪ್ರಭಾತದ ಹಾಡೊಂದನ್ನು ಹೇಳಿ ರಂಜಿಸಿದರು. ಇಂದು ರೋಟರಿಯವರು ಹೆಣ್ಣು ಮಕ್ಕಳಿಗೆ ವೇದಿಕೆ ಕೊಟ್ಟಿದ್ದಾರೆ. ಅವರಿಗೆ ಧನ್ಯವಾದಗಳು ಎಂದರು. ಈ ನಾಟಕಗಳಲ್ಲಿ ಕೊಡಲ್ಪಟ್ಟಿರುವ ಸಂದೇಶವೇ ಎಲ್ಲರಿಗೂ ಬಹುಮಾನ ಎಂದರು. ಇದೇ ಸಂದರ್ಭದಲ್ಲಿ ನಾವಿಕ ದಿನಪತ್ರಿಕೆಯ ಉದ್ಯೋಗಿ ಶ್ರೀಮತಿ ರಾಜೇಶ್ವರಿಯವರಿಗೆ ಅವರ ಪ್ರಾಮಾಣಿಕ ಸೇವೆಗೆ ಆತ್ಮೀಯವಾಗಿ ಸನ್ಮಾನಿಸಲಾಯಿತು.

ನಂತರ ಸಾರ್ವಜನಿಕರಿಗೆ ಮತ್ತು ನಾಟಕ ಸ್ಪರ್ಧಾಳುಗಳಿಗೆ ಮನರಂಜನಾ ಕಾರ್ಯಕ್ರಮವೊಂದನ್ನು ಏರ್ಪಡಿಸಲಾಗಿತ್ತು. ಅದರಂತೆ ಕ್ವಿಜ್ ಕಾರ್ಯಕ್ರಮ ನಡೆಯಿತು. ತಮ್ಮ ಆಂಗ್ಲ ಭಾಷೆಯ ಹೇಳಿಕೆಗೆ ವಾಕ್ಯಕ್ಕೆ ಸರಿಯಾಗಿ ಹಾಡು ಅಥವಾ ಸಿಹಿ ತಿಂಡಿಯ ಹೆಸರು ಹೇಳುವ





ಪ್ರೇಕ್ಷಕರಿಗೆ ಮನರಂಜನೆ ಸ್ಪರ್ಧೆ



ನಾಟಕ ಅಮ್ಮ



ನಾಟಕ ಪುನರ್ಮಿಲನ



ನಾಟಕ ಕೃಷ್ಣ ಸುಧಾಮ



ನಾಟಕ ಇಂತಿಷ್ಟು ಭಾವ



ನಾಟಕ ಪ್ಲಾಸ್ಟಿಕ್ ಭೂತ



ನಾಟಕ ಮಹಿಳಾ ಸಮಾನತೆ



ನಾಟಕ ನೇತ್ರದಾನ ಮಹಾದಾನ



ನಾಟಕ ಹೆಣ್ಣು ಜಗದ ಕಣ್ಣು



ನಾಟಕ ಪ್ರೀತಿಯೇ ಸಂಪತ್ತು



ಬಹುಮಾನ ವಿತರಣೆ




ಸ್ಪರ್ಧೆಯಲ್ಲಿ ಬಿ.ಸಿ. ಗೀತಾ, ಇಂದುಮತಿ ಉಮೇಶ್, ಧನಲಕ್ಷ್ಮಿ, ಸುಧಾ, ಪ್ರತಿಭಾ, ಪ್ರತಿಭಾ, ಪುಷ್ಪಾವತಿ ಸೌಭಾಗ್ಯ, ಕನ್ನಿಕಾ, ಪ್ರೀತಿ ಇವರುಗಳು ಭಾಗಹಿಸಿದ್ದರು.

ಇದನ್ನು ರೊ.ಎನ್.ಜಿ. ಉಷಾರವರು ನಡೆಸಿಕೊಟ್ಟರು. ಭಾಗವಹಿಸಿದ ಎಲ್ಲರಿಗೂ ನೆನಪಿನ ಕಾಣಿಕೆ ನೀಡಲಾಯಿತು. ನಂತರ ಉದ್ಘಾಟಕರಾದ ಜೋನ್ 10 ರ ಸಹಾಯಕ ಗವರ್ನರ್ ರೊ.ಎಸ್.ಆರ್.ನಾಗರಾಜ್‌ರವರು ಮಾತನಾಡಿ, ಇಂದು ನಮಗೆಲ್ಲಾ ಕಲಾವಿದರು ನಗೆ ಹಬ್ಬವನ್ನು ನಡೆಸಿಕೊಟ್ಟಿದ್ದಾರೆ. ಇಂದು ವಿಶೇಷ ದಿನವಾಗಿದೆ. ದಿನಾಂಕ 27.03.2025 ವಿಶ್ವರಂಗಭೂಮಿ ದಿನ. ನಾನು ಕೂಡ ಚಿಕ್ಕಮಗಳೂರಿನಲ್ಲಿ ವ್ಯಾಸಂಗ ಮಾಡುತ್ತಿರುವಾಗ ನಾಟಕಗಳಲ್ಲಿ ಪಾಲ್ಗೊಂಡಿದ್ದೆ ಎಂದು ನೆನಪು ಮಾಡಿಕೊಂಡರು. ಇಂದಿನ ಕಾರ್ಯಕ್ರಮ ಅಚ್ಚುಕಟ್ಟಾಗಿ ಒಳ್ಳೆಯ ಸಿದ್ಧತೆಯೊಂದಿಗೆ ಮೂಡಿ ಬಂದಿದೆ. ಶಿವಮೊಗ್ಗ ನಗರದ ಒಂಬತ್ತು ತಂಡಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿವೆ. ಎಲ್ಲಾ ನಾಟಕ ತಂಡಗಳು ಒಂದೊಂದು ಸಂದೇಶವನ್ನು ಕೊಟ್ಟಿವೆ. ಈ ಹಿಂದೆ ಮಹಿಳೆಯರು ಸಾರ್ವಜನಿಕ ಸಮಾರಂಭದಲ್ಲಿ ಅಥವಾ ನಾಟಕರಂಗದಲ್ಲಿ ಭಾಗವಹಿಸುವುದು ಕಷ್ಟವಿತ್ತು. ಈಗ ಹಾಗಿಲ್ಲ. ಮಹಿಳೆಯರಿಗೆ ಆತ್ಮವಿಶ್ವಾಸವನ್ನು ತುಂಬುವ ಕೆಲಸವಾಗಬೇಕು ಎಂದರು. ನಗು ಎಲ್ಲರಿಗೂ ಸ್ಫೂರ್ತಿಯಾಗುತ್ತದೆ ಎಂಬ ಮಾತನ್ನು ಹೇಳಿ ಆ ಬಗ್ಗೆ ಸ್ಫೂರ್ತಿಯ ಮಾತುಗಳನ್ನು ಹೇಳಿ ತಮ್ಮ ಮಾತನ್ನು ಮುಗಿಸಿದರು.

ತೀರ್ಪುಗಾರರಲ್ಲಿ ಒಬ್ಬರಾದ ಶ್ರೀಮತಿ ಉಷಾ ನಟೇಶ್‌ರವರು ಮಾತನಾಡಿ, ಇಂದಿನ ನಾಟಕದಲ್ಲಿ ಅಭಿನಯಿಸಿದವರಿಗೆ ಮತ್ತು ತಂಡಕ್ಕೆ ಕೆಲವೊಂದು ಹಿತನುಡಿಗಳನ್ನು ಹೇಳಿದರು. ಭಾವ ಅಭಿನಯ ವೇಷ ಭೂಷಣ ಸಮರ್ಪಕವಾಗಿದ್ದಲ್ಲಿ ಪ್ರೇಕ್ಷಕರ ಮನಸ್ಸನ್ನು ತಟ್ಟುತ್ತದೆ. ಇಂದಿನ ತಂಡಗಳ ಭಾಗವಹಿಸುವಿಕೆ ಅವರ ಅಭಿನಯವನ್ನು ವಿವರಿಸುತ್ತಾ ಕೆಲವೊಮ್ಮೆ ನೀಡುವ ಸಂದೇಶ ಮನಮುಟ್ಟುವಂತಿರಬೇಕು ಎನ್ನುತ್ತಾ ಇಂದಿನ ತಂಡಗಳು ಪ್ರದರ್ಶಿಸಿದ ನಾಟಕದ ಜೀವನ ಸಂದೇಶಗಳು ನಿಜಕ್ಕೂ ಮನನೀಯ ಎಂದರು. ಇಂದಿನ ಮೊಬೈಲ್ ಪಿಡುಗಿನಿಂದ ಪ್ರೀತಿ ಕೊರತೆಯನ್ನು ಸಮಾಜದಲ್ಲಿ ಕಾಣುತ್ತಿದ್ದೇವೆ. ಸಮಾಜದಲ್ಲಿ ಕುಟುಂಬದಲ್ಲಿ ಹೆಣ್ಣಿನ ಸಹಕಾರವಿದೆ. ಹೆಣ್ಣಿನ ಜವಾಬ್ದಾರಿಯೂ ಹೆಚ್ಚಿದೆ. ತಾಯಂದಿರು ಮಕ್ಕಳಿಗೆ ನಿತ್ಯ ಸಂಪ್ರದಾಯದಂತೆ ಮಕ್ಕಳಿಗೆ ಕಲಿಸಿ, ದೇಶದ ಪ್ರಗತಿಗೆ ಮಕ್ಕಳು ಮಹಿಳೆಯರು ಕಾರಣರಾಗುವಂತೆ ಮಾಡಿ ಎಂದರು.

ಮುಖ್ಯ ಅತಿಥಿಗಳಾದ ಶ್ರೀಮತಿ ಕವಿತಾ ಸುಧೀಂದ್ರರವರಿಗೆ ತೀರ್ಪುಗಾರರಾದ ಶ್ರೀಮತಿ ಉಷಾ ನಟೇಶ್‌ರವರಿಗೆ, ಡಾ. ಹೆಚ್.ಎಸ್. ನಾಗಭೂಷಣರವರಿಗೆ, ಡಾ. ಚಿದಾನಂದರವರಿಗೆ, ಸಹಾಯಕ ಗವರ್ನರ್ ರೊ. ಎಸ್.ಆರ್.ನಾಗರಾಜರವರಿಗೆ ಆತ್ಮೀಯವಾಗಿ ಸನ್ಮಾನಿಸಲಾಯಿತು. ಈ ಕಾರ್ಯದಲ್ಲಿ ರೊ.ಎಸ್.ಆರ್.ಶ್ರೀನಿವಾಸ್, ರೊ.ಶಾರದಾ ಗೋಪಾಲ್, ರೊ.ಗಾಯತ್ರಿ ಸುಮತೀಂದ್ರ, ರೊ.ಭಾರ್ಗವಿ ಭಟ್, ರೊ.ಕಿಶೋರ್ ಶೀರನಾಳಿ, ರೊ. ಎನ್.ವಿ. ಭಟ್, ರೊ.ವೀರಣ್ಣ ಎ. ಹುಗ್ಗಿಯವರು, ಅಧ್ಯಕ್ಷರಾದ ರೊ.ಕೆ. ಸೂರ್ಯನಾರಾಯಣ ಉಡುಪರು, ಕಾರ್ಯದರ್ಶಿ ರೊ. ಎನ್.ಜಿ. ಉಷಾರವರು ಸಹಕರಿಸಿದ್ದರು.

ಈ ಕೆಳಕಂಡ ತಂಡದವರು ಬಹುಮಾನ ಪಡೆದರು. ವೇದಿಕೆಯಲ್ಲಿದ್ದ ಗಣ್ಯರುಗಳು ಬಹುಮಾನ ವಿತರಣೆ ಮಾಡಿದರು. ನಾಟಕದ ವಿವರ ಕೆಳಕಂಡಂತಿದೆ:

**ಪ್ರಥಮ ಬಹುಮಾನ :-**

**1. ಕಮಲಾ ತಂಡ – ಪ್ರೀತಿಯೇ ಸಂಪತ್ತು**

**ದ್ವಿತೀಯ ಬಹುಮಾನ :-**

**2. ಗುಲಾಬಿ ತಂಡ – ಪ್ಲಾಸ್ಟಿಕ್ ಭೂತ**

**ಮೂರನೇ ಬಹುಮಾನಗಳು :-**

**3. ಕೇದಿಗೆ ತಂಡ – ಕೃಷ್ಣ ಸುಧಾಮ**

**4. ನೈದಿಲೆ ತಂಡ – ನೇತ್ರದಾನ ಮಹಾದಾನ**

**5. ಸಂಪಿಗೆ ತಂಡ – ಇಂತಿಷ್ಟು ಭಾವ**

**ಸಮಾಧಾನಕರ ಬಹುಮಾನಗಳು :-**

**6. ಸೇವಂತಿಗೆ ತಂಡ – ಪುನರ್ಮಿಲನ**

**7. ಜಾಜಿ ತಂಡ – ಹೆಣ್ಣು ಜಗದ ಕಣ್ಣು**

**8. ಮಲ್ಲಿಗೆ ತಂಡ – ಅಮ್ಮ**

**9. ಪಾರಿಜಾತ ತಂಡ – ಮಹಿಳಾ ಸಮಾನತೆ**

ಕೊನೆಯಲ್ಲಿ ರೊ.ಶಾರದಾ ಗೋಪಾಲ್‌ರವರು ವಂದನಾರ್ಪಣೆ ಮಾಡಿದರು. ಈ ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ನಿರೂಪಣೆ ಮಾಡಿದರು. ರೊ. ಎನ್.ವಿ.ಭಟ್ – ನಾಟಕ ತಂಡಗಳ ನಿರ್ವಹಣೆ ಮತ್ತಿತರ ವಿವರ ನೀಡಿದರು. ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಉಪಹಾರದ ವ್ಯವಸ್ಥೆಯಾಗಿತ್ತು. ಈ ನಾಟಕ ಸ್ಪರ್ಧಾ ಕಾರ್ಯಕ್ರಮ ಚೆನ್ನಾಗಿ ಮೂಡಿಬಂತು.



*Happy Birthday Wishes*



V. Sreenivasa
30th March



Anuradha Sheernaly
1st April



## ಚಿಂತನ

**ಬೇವು ಬೆಲ್ಲ ಸವಿದು ಯುಗಾದಿ ಆಚರಿಸಿದ್ದೇವೆ.**
**ಬದುಕು ಕಷ್ಟ ಸುಖಗಳ ಸಮ್ಮಿಶ್ರಣ ಎಂಬ ತತ್ವವೇ**
**ಬದುಕಿನ ಸಾರ್ಥಕ ಭಾವನೆ ಎಂದು ಅರಿತಿದ್ದೇವೆ.**
**ವಿಶ್ವಾವಸು ಸಂವತ್ಸರವು ಎಲ್ಲರಿಗು ಸುಖ, ಶಾಂತಿ, ಸಮೃದ್ಧಿ**
**ತರುವುದೆಂಬ ಭರವಸೆಯೊಂದಿಗೆ ಮುನ್ನಡೆಯೋಣ.**

– ರೊ. ಕೆ. ಸೂರ್ಯನಾರಾಯಣ ಉಡುಪ



To, Book Post